ಓ ಎಸ್ ನಂಃ 31–2015

ಪಿ ಡಬ್ಲ್ಯೂಃ 1

(ಸಾಕ್ಷಿಯನ್ನು ಪುನಃ ಕರೆಯಿಸಿ ದಿನಾಂಕ 15–02–2018 ರಂದು ಪ್ರಮಾಣ ವಚನ ಮಾಡಿಸಲಾಯಿತು.)

**ಪಾಟೀ ಸವಾಲುಃ ಶ್ರೀಮತಿ ಎಸ್ ಎನ್ ಹೆಚ್ ವಕೀಲರಿಂದಃ** ನಾನು ಈ ಮೊದಲು ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿರುವುದಿಲ್ಲ. ನಾನು ನನ್ನ ಮಗಳ ಪ್ರಕರಣದಲ್ಲಿ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಬೆಲೆಕೇರಿ ಗ್ರಾಮ ಸರ್ವೆ ನಂಬರ 89ಃ6 ನಮ್ಮ ಕುಟುಂಬದ ಆಸ್ತಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂಬರ 89ಃ6 ಪಿತ್ರಾರ್ಜಿತವಾಗಿ ನಮ್ಮ ಕುಟುಂಬಕ್ಕೆ ಬಂದಿರುತ್ತದೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ನಿಜವಲ್ಲ. ಸರ್ವೆ ನಂಬರ 89ಃ6 ಕುಟುಂಬದ ಪಾಲಿನಲ್ಲಿ ಪ್ರತಿವಾದಿಯ ಹಿಸ್ಸೆಗೆ ಹಾಕಲಾಗಿದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ನಿಜವಲ್ಲ. ಸರ್ವೆ ನಂಬರ 89ಃ6 ಪ್ರತಿವಾದಿಯರ ಸ್ವಂತ ಆಸ್ತಿ ಎಂದರೆ ನಿಜವಲ್ಲ.

2. ನನ್ನ ಪ್ರಕಾರ ಬಾವಿ ಸರ್ವೆ ನಂಬರ 89ಃ6 ರ ಪೂರ್ವ ದಿಕ್ಕಿಗೆ ಮತ್ತು 89ಃ1 ರ ಗಡಿಯಲ್ಲಿ ಇರುತ್ತದೆ. ನಿಪಿ–6 ದಾಖಲೆಯನ್ನು ನೋಡುತ್ತಿದ್ದು, ಅದರಲ್ಲಿ ಬಾವಿ ಇರುವ ಬಗ್ಗೆ ತೋರಿಸಿರುವುದಿಲ್ಲ. ನಿಪಿ–6 ಕುಮಟಾದ ಸರ್ವೆ ಇಲಾಖೆಯಲ್ಲಿ ರದ್ದು ಆಗಿದೆ ಎಂದರೆ ನಿಜವಲ್ಲ. ದಾವಾ ದಾಖಲು ಮಾಡುವ ಪೂರ್ವದಲ್ಲಿ ನಿಪಿ–6 ಸರ್ವೆ ನಕಾಶೆ ರದ್ದಾಗಿದೆ ಎಂದು ನನಗೆ ಮಾಹಿತಿ ಇತ್ತು ಎಂದರೆ ನಿಜವಲ್ಲ. ಕುಮಟಾದ ಭೂ ದಾಖಲೆ ಸಹಾಯಕ ನಿರ್ದೇಶಕರು, ಕುಮಟಾ ಇವರ ಪ್ರಕರಣದ ನಡಾವಳಿಯಲ್ಲಿ ನಾನು ಎದುರುದಾರ ಆಗಿದ್ದೆ ಎಂದರೆ ನಿಜ. ದಿಃ 22–02–2015 ರಂದು ಸರ್ವೆ ನಂಬರ 89ಃ6, 89ಃ1ಬ ಮತ್ತು 89ಃ7 ಸರ್ವೆ ನಕಾಶೆಯನ್ನು ರದ್ದು ಮಾಡಲಾಗಿದೆ ಎಂದು ಆದೇಶ ಮಾಡಿರುತ್ತಾರೆ ಎಂದರೆ ನಿಜವಲ್ಲ. ಸದರಿ ವಿಷಯ ನನಗೆ ಗೊತ್ತಿದೆ

ಎಂದರೆ ನಿಜವಲ್ಲ. ಸದರಿ ನಕಾಶೆ ರದ್ದಾಗಿದೆ ಎಂದು ತಿಳಿದುಕೊಂಡು ನ್ಯಾಯಾಲಯದಲ್ಲಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ನಿಜವಲ್ಲ. ನಕಾಶೆ ರದ್ದಾಗಿದ್ದರೂ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ನಿಜವಲ್ಲ.

3. ಸರ್ವೆ ನಂಬರ 89ঃ6 ರ ಪೂರ್ವ ಗಡಿಯಲ್ಲಿ 89ঃ1 ಬರುವುದಿಲ್ಲ ಎಂದರೆ ನಿಜವಲ್ಲ. ಸರ್ವೆ ನಂಬರ 89ঃ6 ರ ಪ್ರತಿವಾದಿಯರಿಗೆ ಹೇಗೆ ಬಂತು ಎಂದು ತೋರಿಸಲು ನನ್ನ ಕಡೆ ಇದ್ದಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೆ ನಂಬರ 89ঃ6 ಪ್ರತಿವಾದಿಯರ ಸ್ವಂತ ಆಸ್ತಿ ಎಂದು ಗೊತ್ತಿದ್ದರೂ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ನಿಜವಲ್ಲ. ಸರ್ವೆ ನಂಬರ 89ঃ6 ಹಿಸ್ಸೆ ಆಗುವ ಪೂರ್ವದಲ್ಲಿ ನಮ್ಮ ಕುಟುಂಬದ ಆಸ್ತಿ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂಬರ 89 ರಲ್ಲಿ ಹಿಸ್ಸಾ 1 ಮಾತ್ರ ನಮ್ಮ ಕುಟುಂಬಕ್ಕೆ ಸೇರಿದ ಆಸ್ತಿ ಎಂದರೆ ನಿಜವಲ್ಲ. ಸರ್ವೆ ನಂಬರ 89ঃ1 ರಲ್ಲಿ ಎಂಟಾಣೆ ಜಾಗವನ್ನು ಪ್ರತಿವಾದಿಯರಿಗೆ ಅಡಿಗೆ ಕೋಣೆ ಕಟ್ಟಲು ಬಿಟ್ಟುಕೊಟ್ಟಿರುತ್ತೇವೆ. ಸರ್ವೆ ನಂಬರ 89ঃ1 ರಲ್ಲಿ ಎಂಟಾಣೆ ಜಾಗವನ್ನು ಪ್ರತಿವಾದಿಯರಿಗೆ ಪಾಲಿನಲ್ಲಿ ಬಿಟ್ಟು ಕೊಟ್ಟಿದ್ದೇವೆ ಎಂದರೆ ನಿಜವಲ್ಲ. ಸರ್ವೆ ನಂಬರ 89ঃ1 ರಲ್ಲಿಯ ಎಂಟಾಣೆ ಜಾಗವನ್ನು ಹೊರತುಪಡಿಸಿ ಉಳಿದ ಯಾವುದೇ ಆಸ್ತಿಯನ್ನು ಪ್ರತಿವಾದಿಯರಿಗೆ ನೀಡಿರುವುದಿಲ್ಲ ಎಂದರೆ ನಿಜವಲ್ಲ.

4. ನಮ್ಮ ವಕೀಲರು ನ್ಯಾಯಾಲಯಕ್ಕೆ ಹಾಜರುಪಡಿಸಿದ ಕಾಗದ ಪತ್ರಗಳ ಬಗ್ಗೆ ಮಾಹಿತಿ ಇರುತ್ತದೆ. ನಾನು ಹಾಜರುಪಡಿಸಿದ ಯಾವುದೇ ದಾಖಲೆಗಳಲ್ಲಿ ಸರ್ವೆ ನಂಬರ 89ঃ6 ಕುಟುಂಬದ ಆಸ್ತಿ ಅದರಲ್ಲಿ ಬಾವಿ ಇರುತ್ತದೆ ಎಂದು ನಮೂದು ಇರುವುದಿಲ್ಲ ಎಂದರೆ ನಿಜವಲ್ಲ. ಸರ್ವೆ ನಂಬರ 89ঃ6, 89ঃ1ಬ, 89ঃ1ಅ ಹಾಗೂ 89ঃ7 ನೇ ಆಸ್ತಿಗಳಿಗೆ ಹದ್ದುಬಸ್ತು ಮಾಡಲು ಪ್ರತಿವಾದಿ ಅರ್ಜಿ ನೀಡಿರುತ್ತಾನೆ. ಅದರಲ್ಲಿ

ನಾನು ಸರ್ವೆ ಇಲಾಖೆಗೆ ಪ್ರಭಾವ ಬೀರಿ 89ಃ1ಬದವರು 89ಃ1 ಅ ರಲ್ಲಿಯ ಒಂದಾಣೆ ಜಾಗವನ್ನು ಅತಿಕ್ರಮಣ ಮಾಡಿದ್ದಾರೆ ಎಂದು ತೋರಿಸಿದ್ದೇವೆ ಎಂದರೆ ನಿಜವಲ್ಲ. ಆ ಕಾರಣಕ್ಕಾಗಿ ನಿಪಿ–6 ಕುಮಟಾ ಸರ್ವೆ ಇಲಾಖೆಯಲ್ಲಿ ರದ್ದಾಗಿದೆ ಎಂದರೆ ನಿಜವಲ್ಲ. ದಿಃ 15–02–2015 ರಂದು ನಕಾಶೆ ರದ್ದಾದ ನಂತರ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ನಿಜವಲ್ಲ.

5. ಗ್ರಾಮ ಪಂಚಾಯತ ಅಧ್ಯಕ್ಷರು, ಬೆಲೆಕೇರಿ ಯಾವ ತಾರೀಖಿಗೆ ಭೇಟಿ ಕೊಟ್ಟಿದ್ದಾರೆ ಎಂದು ನನಗೆ ನೆನಪಿರುವುದಿಲ್ಲ, ಆದರೆ ಅವರು ಬಂದು ಪರಿಶೀಲಿಸಿರುತ್ತಾರೆ. ಗ್ರಾಮ ಪಂಚಾಯತಿಯಲ್ಲಿ ಯಾವ ತಾರೀಖಿಗೆ ಭೇಟಿ ಕೊಟ್ಟಿದ್ದಾರೆ ಎಂದು ದಾಖಲೆಗಳನ್ನು ಇಡುತ್ತಾರೆ ಎಂದರೆ ನಿಜ. ಗ್ರಾಮ ಪಂಚಾಯತಿಯವರು ಪರಿಶೀಲನೆ ಮಾಡಿರುವುದಿಲ್ಲ ಎಂದು ಮಾಹಿತಿ ಹಕ್ಕು ಅಡಿಯಲ್ಲಿ ದಾಖಲೆಯನ್ನು ನೀಡಿದ್ದಾರೆ ಎಂದರೆ ನಿಜವಲ್ಲ. ಗ್ರಾಮ ಪಂಚಾಯತಿಯ ಅಧ್ಯಕ್ಷರ ಹತ್ತಿರ ಪ್ರಭಾವ ಬೀರಿ ನಾನು ನಿಪಿ–7 ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ನಿಜವಲ್ಲ. ಗ್ರಾಮ ಪಂಚಾಯತಿಯ ಯಾವುದೇ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ನಿಜವಲ್ಲ. ವೈಜ್ಞಾನಿಕವಾಗಿ ನೀರನ್ನು ಪರಿಶೀಲನೆ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಸತಃ ಹೇಳುತ್ತಾರೆ ಆ ರೀತಿ ಪರಿಶೀಲನೆ ಮಾಡುವುದು ನನಗೆ ನೆನಪಿಗೆ ಬರುವುದಿಲ್ಲ, ಆದರೆ ನೀರು ಉಪು ನೀರು ಆಗಿರುತ್ತದೆ.

6. ಸರ್ವೆ ನಂಬರ 89 ಆಸ್ತಿಗೆ ಸಂಬಂಧಿಸಿದ ಒಡಂಬಡಿಕೆ ನಿಪಿ–8 ದಾಖಲೆ ಆಗಿರುತ್ತದೆ. ನಿಪಿ–8 ಮತ್ತು ನಿಪಿ–9 ದಾಖಲೆಯನ್ನು ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ನಿಜವಲ್ಲ. ನಿಪಿ–10 ರಿಂದ ನಿಪಿ–23 ಫೋಟೋಗಳು ಬಾವಿಗೆ ಸೇರಿದ ಫೋಟೋ ಅಲ್ಲಾ ಎಂದರೆ ನಿಜವಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ತಪ್ಪು ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ನಿಜವಲ್ಲ.

7. ನನ್ನ ಪ್ರಕಾರ ಸರ್ವೆ ನಂಬರ 89ಃ6 ರಲ್ಲಿ ಕುಟುಂಬದ ಬಾವಿ ಇರುತ್ತದೆ. 76ಃ7 ರಲ್ಲಿ ಬೋರ್‌ವೆಲ್ ಇರುತ್ತದೆ. ಅಲ್ಲಿ ಉಪ್ಪು ನೀರು ಇರುತ್ತದೆ. 15 ವರ್ಷದ ಹಿಂದೆ ಕೆಇಬಿಯಿಂದ ಪಂಪ್ ಹಾಕಲು ಪರವಾನಗೆ ಪಡೆದಿರುತ್ತೇನೆ. ಸರ್ವೆ ನಂಬರ 76ಃ7 ರಲ್ಲಿ ಪರವಾನಗೆ ಸಲುವಾಗಿ ವಿಲೇಜ್ ಅಕೌಂಟೆಂಟ ಕಡೆಯಿಂದ ಪ್ರಮಾಣ ಪತ್ರ ಪಡೆದು ಅದನ್ನು ಸಂಬಂಧಪಟ್ಟ ಇಲಾಖೆಗೆ ನೀಡಿದ್ದೇವೆ ಎಂದರೆ ನಿಜವಲ್ಲ. ಈಗ ನನಗೆ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ವಿಲೇಜ್ ಅಕೌಂಟೆಂಟ ನಮಗೆ ನೀಡಿದ ದಾಖಲೆ ಆಗಿರುತ್ತದೆ. ಸರ್ವೆ ನಂಬರ 331ಃ1ಬ ಆಸ್ತಿಗೆ ಸಂಬಂಧಿಸಿದಂತೆ ಪಂಪ್‌ಹೌಸ್ ಕುಡಿಸಲು ವಿಲೇಜ್ ಅಕೌಂಟೆಂಟ ಕಡೆಯಿಂದ ಪ್ರಮಾಣ ಪತ್ರ ಪಡೆದಿದ್ದೇವೆ ಎಂದರೆ ನಿಜ.ಸರ್ವೆ ನಂಬರ 76ಃ7 ಮತ್ತು ಸರ್ವೆ ನಂಬರ 331ಃ1ಬ ರಲ್ಲಿ ನೀರಾವರಿ ಬಾವಿ ಇದೆ ಎಂದರೆ ನಿಜವಲ್ಲ.

8. 2010 ರಲ್ಲಿ ಪಂಪ್‌ಸೆಟ್‌ಗೆ ವಿದ್ಯೂತ್ ಪರವಾನಗೆ ಪಡೆದಿರುತ್ತೇನೆ. ವಿದ್ಯೂತ್ ಪರವಾನಗೆ ಪಡೆದು ಎರಡು ನೀರಾವರಿ ಬಾವಿಗಳನ್ನು ಉಪಯೋಗಿಸುತ್ತಿದ್ದೇನೆ ಎಂದರೆ ನಿಜವಲ್ಲ. ಸರ್ವೆ ನಂಬರ 89ಃ6 ರಲ್ಲಿ ಪಂಪ್‌ಸೆಟ್ ಹಾಕಿರುವ ಬಗ್ಗೆ ವಿದ್ಯೂತ್ ಪರವಾನಗೆ ಪಡೆಯುವ ಕುರಿತು ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಜರುಪಡಿಸಿರುತ್ತೇನೆ. 1 ರಿಂದ 3ನೇ ವಾದಿಯ ಹೆಸರಿಗೆ ಜೂನ್ 2015 ರವರೆಗೆ ಯಾವುದೇ ಮಿಟರ್ ರಿಡಿಂಗ್ ತೋರಿಸಿರುವುದಿಲ್ಲ ಎಂದರೆ ನಿಜವಲ್ಲ. ಏಪ್ರಿಲ್ 2015 ರಲ್ಲಿ ದಾವೆ ಮಾಡಿ ಇಂಜೆಕ್ಷನ್ ಪಡೆದು ನಂತರ ಮಿಟರ್ ಕೂಡಿಸಿದ್ದೇವೆ ಎಂದರೆ ನಿಜವಲ್ಲ. ಸರ್ವೆ ನಕಾಶೆಯಲ್ಲಿ ಬಾವಿ ಪ್ರತಿವಾದಿಯರ ಜಾಗದಲ್ಲಿ ಇರುತ್ತದೆ ಎಂದು ತಿಳಿದು ಬಂದ ನಂತರ ದಾಖಲೆಗಳನ್ನು ಸೃಷ್ಟಿಸಿ ದಾವೆ ಮಾಡಿದ್ದೇನೆ ಎಂದರೆ ನಿಜವಲ್ಲ. ಯಾವ ಕಾಲದಲ್ಲೂ ಈ ದಾವೆ ಮಾಡುವ ಪೂರ್ವದಲ್ಲಿ ಬಾವಿಗೆ ಯಾವುದೇ ಗಡಗಡೆ ಕೂಡಿಸಿರುವುದಿಲ್ಲ ಎಂದರೆ ನಿಜವಲ್ಲ.

9. ನಮ್ಮ ಆಸ್ತಿಯಲ್ಲಿ ಯಾವುದೇ ಸರ್ಕಾರಿ ನಲ್ಲಿ ಇರುವುದಿಲ್ಲ. ಗ್ರಾಮ ಪಂಚಾಯತಿ ಅಧಿಕಾರಿಗಳು 1ನೇ ವಾದಿಯ ಮನೆ ಪಕ್ಕದಲ್ಲಿ ನಲ್ಲಿ ಹಾಕಿದ್ದೇವೆ ಎಂದು ಪ್ರಮಾಣ ಪತ್ರ ನೀಡಿದ್ದಾರೆ ಎಂದರೆ ನಿಜವಲ್ಲ. ನನಗೆ ನಮ್ಮದೇ ಆದ ನೀರಾವರಿ ಸೌಲಭ್ಯಗಳು ನಮ್ಮ ಜಮೀನಿನಲ್ಲಿ ಇದೆ ಎಂದರೆ ನಿಜವಲ್ಲ. ಸರ್ವೆ ನಂಬರ 89ಃ6 ಯಾವ ಕಾಲದಲ್ಲೂ ನಮ್ಮ ಕುಟುಂಬದ ಆಸ್ತಿ ಅಲ್ಲಾ ಎಂದರೆ ನಿಜವಲ್ಲ. ಲಕ್ಷ್ಮೀ ಕೋಂ ಗೋವಿಂದ ನಾಯ್ಕ ನಮ್ಮ ಕುಟುಂಬದ ಸದಸ್ಯಳು ಅಲ್ಲಾ ಎಂದರೆ ನಿಜವಲ್ಲ.

10. ಪಾಲು ಬರವಣಿಗೆಯಲ್ಲಿ ಆಗಿದೆಯೋ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ಕುಟುಂಬದಲ್ಲಿ ಪಾಲು ಆಗುವಾಗ ಬಾವಿ ಮತ್ತು ನೀರಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರಾ ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ಆವಾಗ ಸಮಸ್ಯೆ ಬಂದಿರುವುದಿಲ್ಲ. ಸಾಮಾನ್ಯವಾಗಿ ಪಾಲು ಮಾಡುವಾಗ ಬಾವಿ, ದಾರಿ ಮತ್ತು ಮನೆಗಳ ಬಗ್ಗೆ ಬರೆಯುತ್ತಾರೆ ಎಂದರೆ ನಿಜ. ಸರ್ವೆ ನಂಬರ 89ಃ6 ಕುಟುಂಬದ ಆಸ್ತಿ ಅಲ್ಲದೇ ಇರುವುದರಿಂದ ಅದರ ಬಗ್ಗೆ ಪಾಲಿನಲ್ಲಿ ಬರೆದಿರುವುದಿಲ್ಲ ಎಂದರೆ ನಿಜವಲ್ಲ. ಹೇಗಾದರೂ ಮಾಡಿ ಪ್ರತಿವಾದಿಯರ ಜಮೀನಿನಲ್ಲಿರುವಂತಹ ನೀರನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ನಿಜವಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಶ್ರೀಮತಿ ಎಸ್ ಎನ್ ಹೆಚ್ ವಕೀಲರು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಖ್ತಲೇಖನದಲ್ಲಿ ಬೆರಳಚ್ಚಿಸಲಾಯಿತು)

ಓ.ಹೆ.ಕೆ. ಸರಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಅಂಕೋಲಾ.